## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಗ್ರಾಮ ಚರಿತ ಕೋಶ ಯೋಜನೆಯ ಅನುಷ್ಠಾನಕ್ಕಾಗಿ 2016-17 ನೇ ಸಾಲಿನ ಆರ್ಥಿಕ ಸಾಲಿಗೆ ರೂ.2.00 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ.

**ಓದಲಾಗಿದೆ:** 1) ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗೋಡಿ, ಹಾವೇರಿ ಜಿಲ್ಲೆ ಇವರ ಪತ್ರ ಸಂಖ್ಯೆ: ಕಜಾವಿವಿ/ಆವಿ/ಕ್ರಮಾಂಕ:793/2016-17, ದಿನಾಂಕ 14.09.2016

2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 356 ಗ್ರಾಪಂಅ 2013, ದಿನಾಂಕ 23.11.2013 ಮತ್ತು 14.11.2014

**ಪ್ರಸ್ತಾವನೆ:**

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ಅನುಷ್ಠಾನಗೊಳಿಸಲಾಗುತ್ತಿರುವ "ಕರ್ನಾಟಕ ಗ್ರಾಮ ಚರಿತ ಕೋಶ" ಯೋಜನೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಪ್ರಾಯೋಜಿತ ಯೋಜನೆಯಾಗಿದೆ. "ಕರ್ನಾಟಕ ಗ್ರಾಮ ಚರಿತ ಕೋಶ" ಯೋಜನೆಯು ಕರ್ನಾಟಕ ರಾಜ್ಯದ ಪ್ರತಿಯೊಂದು ಗ್ರಾಮದ ನೈಸರ್ಗಿಕ, ಭೌಗೋಳಿಕ, ಪ್ರಾಣೀ ಪಕ್ಷಿ, ಹವಾಮಾನ, ನೀರು, ಸಾಮಾಜಿಕ ರಚನೆ, ವೃತ್ತಿ ಕುಲ ಕಸುಬುಗಳು, ಉದ್ಯೋಗ, ಆಡಳಿತ, ಸಂಚಾರ ಸಂಪರ್ಕ ವ್ಯವಸ್ಥೆ, ರಾಜಕೀಯ, ನ್ಯಾಯಾಂಗ ವ್ಯವಸ್ಥೆ, ಶಿಕ್ಷಣ, ಗ್ರಂಥಾಲಯ, ಆರೋಗ್ಯ ಮತ್ತು ಸಮುದಾಯ ಸೌಲಭ್ಯಗಳು, ಐತಿಹಾಸಿಕ, ಧಾರ್ಮಿಕ ಸಂಗತಿಗಳು, ಸಾಂಸ್ಕೃತಿಕ ಅಂಶಗಳು, ಸಂಘಗಳು ಮತ್ತು ಭಾಷೆಯ ಚಟವಟಿಕೆಗಳು ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ಅನುಷಂಗಿಕ ಆಕರಗಳೊಂದಿಗೆ ಪರಾಮರ್ಶಿಸಿ ಗ್ರಾಮದ ಮಾಹಿತಿಯನ್ನೊಳಗೊಂಡ ಪರಿಪೂರ್ಣ ಕೈಪಿಡಿಯನ್ನು ಜಿಲ್ಲಾವಾರು ಪ್ರಕಟಿಸಲಾಗುತ್ತಿದೆ.

ಈ ಯೋಜನೆಯಡಿ ಪ್ರಥಮ ಹಂತದಲ್ಲಿ ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆಗಳ ಕೈಪಿಡಿಗಳನ್ನು ಹೊರತರಲಾಗಿದೆ. ಎರಡನೇ ಹಂತದಲ್ಲಿ ಬೆಳಗಾವಿ, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳ ಸಂಪುಟಗಳು ಮುದ್ರಣ ಹಂತದಲ್ಲಿದ್ದು, ಕಲಬುರಗಿ, ಬೀದರ, ಚಿತ್ರದುರ್ಗ, ವಿಜಯಪುರ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಕೈಪಿಡಿಗಳೂ ಸಹ ಮುದ್ರಣಕ್ಕೆ ಸಿದ್ಧಗೊಳ್ಳುತ್ತಿದ್ದು, ಉಳಿದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆ, ಬರವಣಿಗೆ ಕಾರ್ಯ ಪ್ರಗತಿಯಲ್ಲಿದ್ದು, 2016-17 ನೇ ಸಾಲಿನ ಆರ್ಥಿಕ ಸಾಲಿಗೆ ರೂ.2.00 ಕೋಟಿಗಳ ಅನುದಾನವನ್ನು ಬಿಡಗಡೆ ಮಾಡುವಂತೆ ಮೇಲೆ ಓದಲಾದ (1) ರಲ್ಲಿ ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗೋಡಿ, ಹಾವೇರಿ ಜಿಲ್ಲೆ ಇವರು ಸರ್ಕಾರವನ್ನು ಕೋರಿರುತ್ತಾರೆ.

"ಕರ್ನಾಟಕ ಗ್ರಾಮ ಚರಿತ ಕೋಶ" ಯೋಜನೆಯ ಅನುಷ್ಠಾನಕ್ಕೆ ಸರ್ಕಾರದಿಂದ ಇದುವರೆಗೂ ರೂ.5.45 ಕೋಟಿಗಳ ಅನುದಾನವನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ ಬಿಡುಗಡೆಗೊಳಿಸಲಾಗಿದೆ. "ಕರ್ನಾಟಕ ಗ್ರಾಮ ಚರಿತ ಕೋಶ" ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಪ್ರಸಕ್ತ ಆರ್ಥಿಕ ಸಾಲಿಗೆ ಕರ್ನಾಟಕ ಪಂಚಾಯತ್ ರಾಜ್ ಲೆಕ್ಕ ಶೀರ್ಷಿಕೆ 2515-00-101-0-09-103(ಯೋಜನೆ) ಅಡಿ ಯೋಜನೆಯ ಅನುಷ್ಠಾನಕ್ಕಾಗಿ ಮೀಸಲಿರಿಸಿರುವ ರೂ.2.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 356 ಗ್ರಾಪಂಅ 2013, ಬೆಂಗಳೂರು, ದಿನಾಂಕ 07.01.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಾಯೋಜಿತ ಯೋಜನೆಯಾದ "ಕರ್ನಾಟಕ ಗ್ರಾಮ ಚರಿತ ಕೋಶ" ಯೋಜನೆಯ ಅನುಷ್ಠಾನಕ್ಕೆ 2016-17 ನೇ ಸಾಲಿಗೆ ಮೀಸಲಿರಿಸಿರುವ ರೂ.2.00 ಕೋಟಿಗಳ ಅನುದಾನವನ್ನು ಕರ್ನಾಟಕ ಪಂಚಾಯತ್ ರಾಜ್ ಲೆಕ್ಕ ಶೀರ್ಷಿಕೆ 2515-00-101-0-09-103(ಯೋಜನೆ) ಅಡಿ ವೆಚ್ಚ ಭರಿಸಿ, ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗೋಡಿ, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಗೆ ಪಾವತಿಸಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ.ಸಂಖ್ಯೆ ಆಇ 379 ವೆಚ್ಚ-6/2013, ದಿನಾಂಕ 02.01.2017 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಟಿ.ವಿ.ಅರುಣ್ ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1) ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ನಿರ್ದೇಶಕರು(ಪಂ.ರಾಜ್-2), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
4) ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗೋಡಿ, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ.
5) ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6) ಹೆಚ್ಚುವರಿ ಪ್ರತಿ/ಶಾಖಾ ರಕ್ಷಕ ಕಡತ.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾ.ಅ. ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ.
2) ಪ್ರಧಾನ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ. & ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

***